





ಕ್ರೀಡಾಕೂಟದ ಪ್ರಾರಂಭೋತ್ಸವ, ಪ್ರಚಾರ, ಆಯೋಜನೆ ಮತ್ತು ಸಮಾರೋಪಗಳನ್ನೆಲ್ಲ ವಿನೂತನ ಶೈಲಿಯಲ್ಲಿ ಮಾಡಬೇಕೆಂದು ನಿರ್ಧರಿಸಿ ತಂತ್ರಜ್ಞಾನದ ನೆರವು ಪಡೆಯಲು ಮುಂದಾದರು. ಕ್ರೀಡೋತ್ಸವಕ್ಕೆ ಆಗಮಿಸುವವರನ್ನು ಸ್ವಾಗತಿಸಲು ಮನುಷ್ಯರೂಪಿ ಪ್ರಾಣಿಗಳ ಮ್ಯಾಸ್ಕಟ್‌ಗಳ ಬದಲಿಗೆ ರೊಬೋಗಳನ್ನು ನೇಮಿಸಿಬಿಡೋಣ ಅಂದುಕೊಂಡು ಟೊಯೊಟಾ ಕಂಪನಿಗೆ ಜವಾಬ್ದಾರಿ ವಹಿಸಿದರು. ಕಂಪನಿ ಮ್ಯಾಸ್ಕಾಟ್‌ಗಳ ವಿನ್ಯಾಸದ ಸ್ಪರ್ಧೆಯನ್ನೇ ಆಯೋಜಿಸಿತು. ಸ್ಪರ್ಧೆಯಲ್ಲಿ ಅಂತಿಮಗೊಳಿಸಲಾದ 2042 ವಿನ್ಯಾಸಗಳನ್ನು ಟೋಕಿಯೊ ಒಲಿಂಪಿಕ್ಸ್ ಸಂಘಟನಾ ಸಮಿತಿಯ ಮುಂದೆ ಹಾಜರುಪಡಿಸಲಾಯಿತು.

ಮಾಧ್ಯಮ ತಜ್ಞರು ಮತ್ತು ಮ್ಯಾಸ್ಕಾಟ್ ಆಯ್ಕೆ ಸಮಿತಿಯ ಸದಸ್ಯರು ಎರಡು ಸಾವಿರಕ್ಕೂ ಹೆಚ್ಚು ವಿನ್ಯಾಸಗಳಿಂದ ಮೂರು ಜೋಡಿಗಳನ್ನು ಅಂದರೆ ಆರು ಮ್ಯಾಸ್ಕಾಟ್‌ಗಳನ್ನು ಅಂತಿಯ ಸುತ್ತಿಗೆ ಆಯ್ಕೆಮಾಡಿ, 2017ರ ಡಿಸೆಂಬರ್ 7ರಂದು ಅನಾವರಣಗೊಳಿಸಿದರು. ನಂತರ ಆರರಲ್ಲಿ ಯಾವುದಾದರೂ ಎರಡನ್ನು ಆಯ್ಕೆಮಾಡುವ ಅಧಿಕಾರವನ್ನು ಶಾಲಾಮಕ್ಕಳಿಗೆ ನೀಡಿ, ಆರೂ ವಿನ್ಯಾಸಗಳನ್ನು ಜಪಾನಿನ 15,679 ಪ್ರಾಥಮಿಕ ಶಾಲೆಗಳಲ್ಲಿ ಪ್ರದರ್ಶಿಸಿ, ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು. ಈ ಚುನಾವಣೆಯಲ್ಲಿ ಜಪಾನಿನ ಡಿಸೈನರ್ ರಿಯೊ ತಾನಿಗುಚಿ ರಚಿಸಿದ ವಿನ್ಯಾಸಗಳು ಪ್ರಥಮ ಸ್ಥಾನಕ್ಕೆ ಆಯ್ಕೆಯಾದವು. ನಂತರ ಅವುಗಳಿಗೆ ಹೆಸರಿಡುವ ಸ್ಪರ್ಧೆಯೂ ನಡೆಯಿತು. ಅಂತಿಮವಾಗಿ ಮಿರಾಯ್‌ಟೊವ ಮತ್ತು ಸೊಮೈಟಿ ಎಂಬ ಹೆಸರಗಳನ್ನಿಡಲಾಯಿತು.

ಮಿರಾಯ್‌ಟೊವ ಸಮ್ಮರ್ ಒಲಿಂಪಿಕ್ಸ್‌ನ ಲಾಂಛನದಲ್ಲಿರುವ ನೀಲಿ ಬಣ್ಣದಿಂದ ಸ್ಫೂರ್ತಿ ಪಡೆದು ಅದೇ ಬಣ್ಣ ಹೊಂದಿದ್ದರೆ, ಸೊಮೈಟಿ ಗುಲಾಬಿರಂಗಿನ ಚೆರ್ರಿ ಹೂವುಗಳ ಬಣ್ಣದಿಂದ ಕಂಗೊಳಿಸುತ್ತಿದೆ. ದೊಡ್ಡ ಕಣ್ಣುಗಳು, ವಿವಿಧ ಫೈಬರ್ ಜಾಯಿಂಟ್‌ಗಳು ಮತ್ತು ಹಣೆಯ ಮೇಲೆ ಕ್ಯಾಮೆರಾ ಹೊಂದಿರುವ ಇವು ಎದುರಿಗೆ ಬಂದ ಜನರನ್ನು ಗುರುತಿಸಿ ಅವರ ಬೇಡಿಕೆಗಳನ್ನು ಪೂರೈಸುವ ಶಕ್ತಿ ಹೊಂದಿವೆ. ತಲೆಯ ಮೇಲೆ ಆಂಟೆನಾ ಹೊಂದಿದ್ದು, ಎದುರಿಗಿರುವವರ ಪ್ರತಿಯೊಂದೂ ಚಲನೆಯನ್ನು ಗ್ರಹಿಸಿ, ಪ್ರತಿಕ್ರಿಯೆ ನೀಡಬಲ್ಲ ಸಾಮರ್ಥ್ಯ ಪಡೆದಿವೆ. ಥೇಟ್ ಮನುಷ್ಯರಂತೆಯೇ ಕೆಲಸ ನಿರ್ವಹಿಸಬಲ್ಲ ಮ್ಯಾಸ್ಕಾಟ್‌ಗಳು ಅತಿಥಿಗಳನ್ನು ಶೇಕ್‌ಹ್ಯಾಂಡ್ ಮಾಡಿ ಸ್ವಾಗತಿಸುವುದಲ್ಲದೆ, ನಿರ್ಗಮಿಸುವಾಗ ಕೈಬೀಸುತ್ತವೆ. ಪಾಲಿಯೆಸ್ಟರ್ ಮತ್ತು ಪಾಲಿಪ್ರೊಪೆಲಿನ್‌ನಿಂದ ತಯಾರಿಸಲಾದ ಇವು 20 ಸೆಂ.ಮೀ. ಗಾತ್ರದ ಹೆಡ್‌ಬ್ಯಾಂಡ್ ಹೊಂದಿದ್ದು, ಒಟ್ಟು 60 ಸೆಂ.ಮೀ. ಎತ್ತರ ಹೊಂದಿವೆ.

ಜಪಾನಿ ಭಾಷೆಯಲ್ಲಿ 'ಮಿರಾಯ್' ಎಂದರೆ ಭವಿಷ್ಯ ಮತ್ತು 'ಟೊವ' ಎಂದರೆ ಶಾಶ್ವತ ಎಂದರ್ಥ. ಒಲಿಂಪಿಕ್ಸ್ ಆಯೋಜಕರ ಪ್ರಕಾರ ಮಿರಾಯ್‌ಟೊವ ಎಂದರೆ 'ಶಾಶ್ವತ ನಂಬಿಕೆಯ ಭವಿಷ್ಯಕಾಲ'. 2020ರ ಒಲಿಂಪಿಕ್ಸ್ ಲಾಂಛನದಲ್ಲಿರುವ ನೀಲಿ ಚೌಕಗಳನ್ನು ಮೈಯಿಡೀ ಹೊಂದಿರುವ ಮಿರಾಯ್‌ಟೊವ ಜಪಾನಿ ಗಾದೆಮಾತಿನಿಂದ ಸ್ಫೂರ್ತಿ ಪಡೆದಿದ್ದು, 'ಹಳೆಯದರಿಂದ ಕಲಿತು ಹೊಸ ಚಿಂತನೆಗಳನ್ನು ಮೈಗೂಡಿಸಿಕೊ' ಎಂಬ ಅರ್ಥವನ್ನು ಪ್ರತಿನಿಧಿಸುತ್ತದೆ. ಎರಡೂ ರೊಬೋಗಳು ಎಳೆಯರಿಂದ ಹಿಡಿದು ವಯಸ್ಕರವರೆಗೆ ಎಲ್ಲರನ್ನೂ ಆಕರ್ಷಿಸಬಲ್ಲವು ಎಂದಿದ್ದರು ಆಯೋಜಕರು. ಇನ್ನು ಪ್ಯಾರಾಲಿಂಪಿಕ್ಸ್ ಅನ್ನು ಪ್ರತಿನಿಧಿಸುತ್ತಿರುವ ಸೊಮೈಟಿ, ಇಂಗ್ಲಿಷ್‌ನ 'ಸೊ ಮೈಟಿ' (So Mighty) ಎಂಬುದನ್ನು ಧ್ವನಿಸುತ್ತದೆ. ಅಂದರೆ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಸ್ಪರ್ಧಿಗಳ ಅಂಗವೈಕಲ್ಯವನ್ನು ಮರೆಸಿ ಅವರಲ್ಲಿ ಹೆಚ್ಚಿನ